Sri J. B. MALLARADHYA.—Is it not the duty of the Deputy Chairman to check up the books of the bookmakers and see that Government revenues are safeguarded ?

Sri T. MARIAPPA.—The Deputy Commissioner checks up the accounts, collects the tax and remits it to Government.

Compounding Fee collected from Kanakapura, Sathanur and Kaggalipura Forest Ranges.

*Q.—120. Sri M. LINGE GOWDA (Kanakapura).—

Will the Government be pleased to state :—

the amount collected in the Forest Circles of Kanakapura, Sathanur and Kaggalipur Forest Range from 1st January 1958 to 31st December 1958, under the following items :

(*i*) compounding fee for unauthorised grazing of goats in the forest area ;

(*ii*) compounding fee for transporting greenwood without licence ?

(Information may be furnished separately for each circle in respect of each item).

A.—Sri K. F. PATIL (Minister for Agriculture and Food).

		Rs. nP.
(*i*)	Kanakapura Range ...	6,467-00
	Sathanur Range ...	1,963-50
	Anekal Range (Kaggalipur) ...	1,040-00
(*ii*)	Kanakapura Range ...	1,106-00
	Sathanur Range ...	1,501-78
	Anekal Range ...	439-11

ಶ್ರೀ ಎಂ. ಲಿಂಗೇಗೌಡ.—ಕನಕಪುರ ರೇಂಜು ಸಾತನೂರು ರೇಂಜು, ಆನೇಕಲ್ ರೇಂಜುಗಳಲ್ಲಿ ವಸೂಲ್ಮಾಡಿದ ಮೊಬಲಗಿನಲ್ಲಿ ಒಂದಕ್ಕೊಂದಕ್ಕೆ ಇಷ್ಟೊಂದು ವ್ಯತ್ಯಾಸ ಬರಲು ಕಾರಣವೇನು ?

ಶ್ರೀ ಕೆ. ಎಫ್. ಪಾಟೀಲ್.—ಅಷ್ಟಷ್ಟು ವ್ಯತ್ಯಾಸ ಏಕೆ ಬಂತು ಎಂದು ಹೇಳುವುದು ಕಷ್ಟ. ಎಷ್ಟು ವಸೂಲಾಗಿದೆಯೋ ಅಷ್ಟು ಮೊಬಲಗನ್ನು ಉತ್ತರದಲ್ಲಿ ಸೂಚಿಸಿದೆ. ಕನಕಪುರ ರೇಂಜಿನಲ್ಲಿ ಹೆಚ್ಚು ಮೊಬಲಗು ವಸೂಲಾಗಿರಬೇಕು. ಅದಕ್ಕೋಸ್ಕರ ಆ ರೀತಿ ವ್ಯತ್ಯಾಸವಿದೆ.

ಶ್ರೀ ಎಂ. ಲಿಂಗೇಗೌಡ.—ಅನಧಿಕೃತವಾಗಿ ಆಡುಗಳನ್ನು ಅರಣ್ಯಪ್ರದೇಶದಲ್ಲಿ ಮೇಯಿಸುವುದಕ್ಕಾಗಿ ಒಂದೊಂದು ಜಾಗದಲ್ಲಿ ಒಂದು ಒಂದೂವರೆ ರೂಪಾಯಿಯಂತೆ ವಸೂಲು ಮಾಡಿರುವ ಪೂರ್ತಿ ಮೊಬಲಗಷ್ಟೂ ಚೈಜರಿಗೆ ಕ್ರೆಡಿಟ್ ಆಗಿದೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಆ ಸಂಬಂಧದಲ್ಲಿ ಮಾನ್ಯ ಸದಸ್ಯರು ಕೆಲವು ದೂರುಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ಅವರಿಗೆ ಉತ್ತರಗಳನ್ನು ಕಳುಹಿಸುತ್ತೇನೆ.

ಶ್ರೀ ಎಂ. ಲಿಂಗೇಗೌಡ.—ಅನುಮತಿಯಿಲ್ಲದೆ ಹಸಿಕಟ್ಟಿಗೆಯನ್ನು ಸಾಗಿಸುವುದಕ್ಕೆ ಕಾಂಪೌಂಡಿಂಗ್ ಫೀಜು ಹಾಕಿದ್ದೀರಿ. ಆ ರೀತಿ ಫೈನ್ ಹಾಕುವುದಕ್ಕೆ ಸೌದೆ ಗೋಸ್ಕರ ಲೈಸೆನ್ಸ್ ಇಲಾಖೆಯಿಂದ ಕೊಡದೇ ಇರುವುದೂ ಕೂಡ ಒಂದು ಕಾರಣವಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಲೈಸೆನ್ಸ್ ಕೊಡದೆ ಇದ್ದುದೂ ಒಂದು ಕಾರಣ. ಅವರೇ ಅನುಮತಿಯೆಲ್ಲದೆಯೇ ಹಸಿಕಟ್ಟಿಗೆ ಸಾಗಿಸಿದ್ದೂ ಒಂದು ಕಾರಣ. ಲೈಸೆನ್ಸ್ ಕೊಡದೇ ಇರುವುದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಲಿಂಗೇಗೌಡ.—ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್ ಹಸಿ ಸೌದೆಮರಗಳನ್ನು ಕಡಿಯಲು ಅನುಮತಿ ಕೊಡದಿದ್ದರೂ ಅನಧಿಕೃತವಾಗಿ ಅವುಗಳನ್ನು ಕಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಹಸಿಕಟ್ಟಿಗೆಯನ್ನು ಅನುಮತಿಯಿಲ್ಲದೆ ಸಾಗಿಸಬಾರದು ಎಂದು ಸೂಚನೆಯನ್ನು ಕೊಟ್ಟಿದೆ. ಏಕೆಂದರೆ ಹಸಿಗಿಡಗಳು ಪೂರಾ ನಾಶವಾಗುತ್ತವೆ. ಅದಕ್ಕೋಸ್ಕರ ತಡೆದಿದ್ದೇವೆ.

Quantity of Paddy purchased and sold during 1957-58 and 1958-59.

*Q.—123. Sri H. S. RUDRAPPA (Honnali).—

Will the Government be pleased to state :—

(*a*) the quantity of paddy acquired by the Government during the year 1957-58 together with the rate at which it was purchased,

(*b*) out of it, the quantity sold to the public ;

(*c*) the quantity of paddy or rice that may be acquired by the Government during the year 1958-59 according to the Mysore Rice Procurement Order, 1959 and the quantity so far acquired ;

(*d*) whether representations have been made to the Government that the Mysore Rice Procurement Order is defective and causes great hardship and harassment to the ryots and the dealers ;

(*e*) whether they intend to modify the above order ?

A.—Sri K. F. PATIL (Minister for Agriculture and Food).—

(*a*) The quantity of paddy purchased by Government during 1957-58 is 2,42,600 pallas. The maximum purchase price of II variety paddy was fixed at Rs. 23 per palla or Rs. 10-50 per Imp. md.

(*b*) 50,310 pallas of rice have been issued up to 7th February 1959.

(*c*) Quantity that may be acquired during 1958-59 is about 50,000 tons of rice. Quantity so far freezed is 1,60,712 pallas (upto 17th February 1959).

(*d*) Yes.

(*e*) The Mysore Rice Procurement (Levy) Order, 1959, has been amended under Notification No. RDE/80—VPP—58, dated 31st January 1959.

Sri H. S. RUDRAPPA.—In view of the fact that only 50,310 pallas of rice were issued to the public last year, is there no demand for more rice?

Sri K. F. PATIL.—There was demand, but the rice that was supplied was dehusked rice and there was not so much demand for dehusked rice. There was demand for polished rice.

Sri H. S. RUDRAPPA.—Then why was not the rice polished and supplied to the consumers?

ಶ್ರೀ ಕೆ. ಎಫ್. ಪಾಟೀಲ್.—ಒಂದು ರೂಪಾಯಿಗೆ ಎರಡು ಸೇರಿನ ಪ್ರಕಾರ ಅಕ್ಕಿಯನ್ನು ಮಾರಾಟ ಮಾಡ ಬೇಕಾಗಿದ್ದುದರಿಂದಲೂ, ಅಕ್ಕಿಯನ್ನು ಹೆಚ್ಚು ಪಾಲಿಷ್ ಮಾಡಿಸಿದರೆ ಅದರಲ್ಲಿ ಇಳುವರಿ ಹೆಚ್ಚಾಗಿ, ಧಾರಣೆ ಅಧಿಕವಾಗುತ್ತದೆಯೆಂಬ ಕಾರಣದ ಮೇಲೂ ಮತ್ತು ಅಕ್ಕಿಯನ್ನು ಹೆಚ್ಚು ಪಾಲಿಷ್ ಮಾಡಿಸಿದರೆ ಅದರಲ್ಲಿರ ತಕ್ಕ ನೂಟ್ರಿಷಸ್ (ಸಾರವನ್ನು) ಹೋಗಿಬಿಡುತ್ತದೆ ಯೆಂಬ ಕಾರಣದಿಂದಲೂ ಅಕ್ಕಿಯನ್ನು ಪಾಲಿಷ್ ಮಾಡಿಸಲಿಲ್ಲ.

Sri H. S. RUDRAPPA.—Could not the Government have polished and supplied it to the people?

ಅಧ್ಯಕ್ಷರು.—ಹೆಚ್ಚು ಪಾಲಿಷ್ ಮಾಡಿಸಿದರೆ ಅಕ್ಕಿ ಯಲ್ಲಿರತಕ್ಕ ವಿಟಮಿಕ್ ಭಾಗ ಲುಕ್ಸಾನಾಗುವುದಲ್ಲದೆ ಅಕ್ಕಿ ಇಳುವರಿ ಕೂಡ ಜಾಸ್ತಿಯಾಗುತ್ತದೆಯೆಂಬ ಕಾರಣದಿಂದ ಪಾಲಿಷ್ ಮಾಡಿಸಲಿಲ್ಲ ಎಂಬುದಾಗಿ ಉತ್ತರ ಹೇಳಿದ್ದಾರೆ.

Sri H. S. RUDRAPPA.—May I take it that because Government sustained loss, they did not polish the rice and supply it?

ಶ್ರೀ ಕೆ. ಎಫ್. ಪಾಟೀಲ್.—ಈಗ ತಾವು ಕೊಡತಕ್ಕ ಸಲಹೆಯನ್ನು ಮುಂದೆ ಅನುಭವಕ್ಕೆ ತಂದುಕೊಂಡು ಅದು ಉತ್ತಮವೆಂಬುದಾಗಿ ಕಂಡು ಬಂದರೆ ಅದೇ ರೀತಿ ಸರಬರಾಯಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

Sri G. VENKATAI GOWDA.—What is the amount of dehusked rice that remains undisposed? What is the loss sustained by Government?

ಶ್ರೀ ಕೆ. ಎಫ್. ಪಾಟೀಲ್.—ಈ ವರ್ಷ ನಮ್ಮ ಕೈಯಲ್ಲಿಹಾಲ ಏಳುವರೆ ಸಾವಿರ ಟನ್ ಅಕ್ಕಿ ಆಗುವಷ್ಟು ಭತ್ತ ಇದೆ.

Sri C. K. RAJAIAH SETTY.—Is the Government aware that there is heavy shortage due to want of proper storage facilities?

Mr. SPEAKER.—That question does not arise.

Sri C. K. RAJAIAH SETTY.—May I know how much shortage is there?

ಶ್ರೀ ಕೆ. ಎಫ್. ಪಾಟೀಲ್.—ಈ ಲೆಕ್ಕಾಚಾರ ಗಳೆನ್ನೂ ಪೂರ್ತಿಯಾಗಿ ಆಗಿಲ್ಲ. ಈ ವರ್ಷಾಖ್ಯೆರಿಗೆ ಲೆಕ್ಕಗಳೆಲ್ಲ ಪೂರೈಸದೆ ಈಗ ಏನನ್ನು ಹೇಳುವುದಕ್ಕೂ ಆಗುವುದಿಲ್ಲ.

ಶ್ರೀ ಡಿ. ಮೂಕಪ್ಪ.—ಸರ್ಕಾರದವರು ಈ ರೀತಿ ಭತ್ತ ಶೇಖರಣೆ ಮಾಡುವುದರ ಉದ್ದೇಶ ಏನು?

ಶ್ರೀ ಕೆ. ಎಫ್. ಪಾಟೀಲ್.—ದೇಶದಲ್ಲಿ ಅಕ್ಕಿಯ ಬೆಲೆ ಬಹಳವಾಗಿ ಏರಿದಾಗ ಬಡವರಿಗೆ ಅನುಕೂಲ ವಾಗಲು ಕಡಮೆ ದರದಲ್ಲಿ ಅಕ್ಕಿ ಮಾರಾಟ ಮಾಡ ಬೇಕೆಂಬ ಉದ್ದೇಶದಿಂದ ಭತ್ತವನ್ನು ಸಂಗ್ರಹಣೆ ಮಾಡಲಾಗುತ್ತಿದೆ.

ಶ್ರೀ ಡಿ. ಮೂಕಪ್ಪ.—ಭತ್ತ ಬೆಳೆಯುವಕ್ಕೆ ರೈತ ರಲ್ಲೂ ಬಡವರಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ?

ಅಧ್ಯಕ್ಷರು.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಭತ್ತಕ್ಕೆ ಮಾರ್ಕೆಟ್ ರೇಟ್ಸೇನಿದೆ?

ಶ್ರೀ ಕೆ. ಎಫ್. ಪಾಟೀಲ್.—ಈಗ ಇರತಕ್ಕ ಧಾರಣೆಗಳ ವಿವರ ನನ್ನಲ್ಲಿಲ್ಲ. ಹಿಂದಿನ ಧಾರಣೆಗಳು ಮಾತ್ರ ಈಗ ನನ್ನಲ್ಲಿವೆ. ತಮಗೆ ಬೇಕಾದರೆ ಸಂಗ್ರ ಹಿಸಿ ಕೊಡಬೇಕು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಿಂದಿನ ರೇಟನ್ನೇ ತಾವು ಈಗಲೂ ಇಟ್ಟುಕೊಂಡಿರುವುದರಿಂದ ಇದು ಜಿ.ಎಂ.ಎಫ್. ಯೋಜನೆಗೆ ಕುಂದಕವನ್ನು ತರುವುದಿಲ್ಲವೇ?

ಶ್ರೀ ಕೆ. ಎಫ್. ಪಾಟೀಲ್.—ಜಿ ಎಂ.ಎಫ್. ಯೋಜನೆಯು ಯಶಸ್ವಿಯಾಗುವುದಕ್ಕೆ ಬೇರೆ ರೂಪ ದಲ್ಲಿ ಸಹಾಯ ನೀಡಬಹುದು. ಆದರೆ ದೇಶದಲ್ಲೆಲ್ಲಾ ಆಹಾರ ಧಾನ್ಯಗಳ ಧಾರಣೆವಾಸಿಗಳು ಒಂದೇ ಮಟ್ಟದಲ್ಲಿರಬೇಕೆಂಬ ಒಂದು ನೇಮವನ್ನು ಕೇಂದ್ರ ಸರ್ಕಾರ ವಿಧಿಸಿದೆ. ಅದಕ್ಕನುಸರಿಸಿ ನಾವೀಗ ಭತ್ತವನ್ನು ಇಲ್ಲಿ ಕೊಳ್ಳಬೇಕಾಗಿದೆ; ಅದರಂತೆ ಕೊಳ್ಳುತ್ತಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಿಂದೆ ಕೊಂಡಿ ದ್ದಂಥ ಅಕ್ಕಿಯಲ್ಲಿ ನುಮಾರು 50 ಸಾವಿರದ 300 ಟನ್‌ಗಳಷ್ಟು ಅಕ್ಕಿ ಉಳಿದು ಅದರಲ್ಲಿ ಹೆಚ್ಚು ಭಾಗ ಜನರು ತಿನ್ನಲಿಕ್ಕೆ ಆಗದಂತೆ ಕೆಟ್ಟುಹೋಗಿತ್ತೆಂಬುದು ನಿಜವೇ?

ಶ್ರೀ ಕೆ. ಎಫ್. ಪಾಟೀಲ್.—ಇಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಸರ್ಕಾರದವರು ಹಿಂದೆ ಭತ್ತವನ್ನು ಓಪನ್ ಮಾರ್ಕೆಟ್ಟಿನಲ್ಲಿ ಕೊಂಡರೋ ಅಥವಾ ಕಮ್ಯಾಂಡಿಯರಿಂಗ್ ಮಾಡಿಕೊಂಡರೋ?

ಶ್ರೀ ಕೆ. ಎಫ್. ಪಾಟೀಲ್.—ಅಕ್ಸಿಜಿಷ್ಟ ಪ್ರಕಾರ ಕೊಳ್ಳಲಾಯಿತು.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ಎಷ್ಟು ಭತ್ತ ಕೊಳ್ಳಲಾಯಿತು ?

ಶ್ರೀ ಕೆ. ಎಫ್. ಪಾಟೀಲ್.—ಮೊದಲು ನಾವಿಲ್ಲಿ ಪರ್ಚಾ ಒಂದಕ್ಕೆ 10-50 ರೂಪಾಯಿ ಪ್ರಕಾರ ಕೊಳ್ಳುತ್ತಿದ್ದೆವು. ಆಗ ಕೇಂದ್ರದಿಂದ 9-52 ರೂಪಾಯಿ ಪ್ರಕಾರ ಕೊಳ್ಳಬೇಕೆಂದು ಆದೇಶ ಬಂತು. ಆದ್ದರಿಂದ ಅಲ್ಲಿಂದ ಮುಂದಕ್ಕೆ ಭತ್ತವನ್ನು ಕೊಳ್ಳಲಿಲ್ಲ. ಅಲ್ಲಿಯ ವರೆಗೆ ಎಷ್ಟು ಭತ್ತ ಕೊಳ್ಳಲಾಗಿತ್ತೋ ಅಷ್ಟಕ್ಕೇ ನಿಲ್ಲಿಸಿದೆವು.

ಶ್ರೀ ಎ. ಭೀಮಪ್ಪನಾಯಕ್.—ಈಗ ರೈತ ತನಗೆ ಹೆಚ್ಚಾದ್ದನ್ನು ಓಪನ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡತಕ್ಕದ್ದನ್ನು ಸರ್ಕಾರ ಏಕೆ ಕೊಳ್ಳಬಾರದು ?

ಶ್ರೀ ಕೆ. ಎಫ್. ಪಾಟೀಲ್.—ಆದರೆ ಈಗ ಬೆಳೆ ಕಡಮೆಯಾಗಿದೆ. ಆದುದರಿಂದ ಬೇರೆ ರೀತಿಯಲ್ಲಿ ಕೊಳ್ಳುವುದಕ್ಕೆ ಪ್ರಾರಂಭ ಮಾಡಿದೆ.

ಶ್ರೀ ಎ. ಭೀಮಪ್ಪನಾಯಕ್.—ರೈತ ಆಹಾರ ಧಾನ್ಯ ಬೆಳೆಯಲು ಎಷ್ಟು ಖರ್ಚು ಮಾಡಿದ್ದಾನೋ ಅಷ್ಟಾದರೂ ಅವನಿಗೆ ದೊರೆಯುವಂತೆ ಒಂದು ಅನುಕೂಲವಾದ ಬೆಲೆಯನ್ನು ನಿಗದಿ ಮಾಡಬೇಕಾದದ್ದು ನ್ಯಾಯವಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಆದರೆ ಇಲ್ಲ ನ್ಯಾಯ, ಅನ್ಯಾಯದ ಪ್ರಶ್ನೆ ಬರುವುದಿಲ್ಲ. ದೇಶದಲ್ಲಿ ಆಹಾರದ ಕೊರತೆಯುಂಟಾದಾಗ ದೇಶದಲ್ಲಿ ಅಕ್ಕಿಯನ್ನು ಅಗ್ಗದ ದರದಲ್ಲಿ ಮಾರಾಟಮಾಡಬೇಕಾಗಿರುವುದರಿಂದ ನಾವೀಗ ಭತ್ತವನ್ನು ಆಲ್ ಇಂಡಿಯಾದ ದೃಷ್ಟಿಯಿಂದ ಕೇಂದ್ರ ಸರ್ಕಾರ ನಿರ್ಧರಿಸಿರುವಂಥ ಬೆಲೆಗೇ ಭತ್ತವನ್ನು ಕೊಳ್ಳಬೇಕಾಗಿದೆ. ರೈತರಿಗೆ ಹೆಚ್ಚು ಧಾನ್ಯ ಬೆಳೆಯುವಂತೆ ಪ್ರೋತ್ಸಾಹ ನೀಡತಕ್ಕ ಬಗ್ಗೆ ರೈತರಿಗೆ ಬೇರೆ ರೂಪದಲ್ಲಿ ಅನುಕೂಲತೆಗಳನ್ನು ಕಲ್ಪಿಸಿ ನಾವು ಈಗ ಕೇಂದ್ರ ಸರ್ಕಾರದ ಆದೇಶಕ್ಕೆ ತಕ್ಕಂತೆ ಭತ್ತ ಕೊಳ್ಳಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ರೈತರಿಗೆ ಹೆಚ್ಚಿನ ಬೆಲೆಯನ್ನು ಕೊಟ್ಟು ಕೇಂದ್ರದ ದರಕ್ಕೆ ಹೆಚ್ಚಾಗುವುದನ್ನು ರಾಜ್ಯ ಸರ್ಕಾರದಿಂದ ಏಕೆ ಸಬ್‌ಸಿಡೈಸ್ ಮಾಡಬಾರದು ?

ಶ್ರೀ ಕೆ. ಎಫ್. ಪಾಟೀಲ್.—ಆದರೆ ಹಿಂದೆ ಅದಕ್ಕೆ ಪ್ರತಿಯಾಗಿ ಬೋನಸ್ ಕೊಡಬೇಕೆಂದು ಮಾಡಿತ್ತು. ಈಗಲೂ ಅದನ್ನು ಕೊಡತಕ್ಕ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ವಿ. ಸುಬ್ಬಯ್ಯನಾಯಕ್.—ಹಿಂದೆ ಸರ್ಕಾರದವರು ಮಾರಾಟ ಮಾಡಲು ಕೊಂಡಿದ್ದ ಅಕ್ಕಿ ದಾಸ್ತಾನು ಇನ್ನೂ ಇದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಇದೆ.

Sri M. C. NARASIMHAN.—May I know if there was any loss in 1957-58 and if so the amount ?

ಶ್ರೀ ಕೆ. ಎಫ್. ಪಾಟೀಲ್.—ಈ ಯೋಜನೆಯನ್ನು ಇಲ್ಲಿಯ ತನಕ ಲಾಭ-ಲುಕ್ಸಾನ್ ಇಲ್ಲದ ನೀತಿಯ ಮೇಲೆ ನಡೆಸಿದ್ದುಂಟು. ಈಗ ಇನ್ನೂ ವರ್ಷ ಪೂರೈಸಿಲ್ಲ. ಆದುದರಿಂದ ಆ ವಿವರಗಳೆಲ್ಲ ಈಗ ಸಿಕ್ಕುವುದಿಲ್ಲ.

Sri A. R. BADRI NARAYAN.—In view of the large stocks available, where is the need of acquiring food-grains this year ?

ಶ್ರೀ ಕೆ. ಎಫ್. ಪಾಟೀಲ್.—ನಮ್ಮಲ್ಲಿ ಹೋಡ ವರ್ಷದ ದಾಸ್ತಾನಿನ್ನೂ ಏಳು-ಎಂಟು ಸಾವಿರ ಟನ್ ಅಷ್ಟು ಉಳಿದಿದೆ. ನಮಗೀಗ ಬೇಕಾಗಿರುವುದು 50 ಸಾವಿರ ಟನ್ ಅಕ್ಕಿ. ಆದುದರಿಂದ ನಮಗಿನ್ನು ಹೆಚ್ಚಿಗೆ ಬೇಕಾಗಿರುವ 43 ಸಾವಿರ ಟನ್ ಅಷ್ಟು ಈಗ ಕೊಳ್ಳಬೇಕೆಂದು ನಿರ್ಧರಿಸಿದ್ದೇವೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಈಗ ತಂದಿರತಕ್ಕ ನಿಯಮದಲ್ಲಿ ರೈತರಿಗೆ ಎಷ್ಟು ಬಿಡಬೇಕೋ ಅಷ್ಟನ್ನು ಬಿಡದಿರುವುದರಿಂದ ರೈತರಿಗೆ ತುಂಬ ಅನ್ಯಾಯವಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಕೆಲವು ಕಡೆ ಆ ತೊಂದರೆಯಾಗಿದೆ. ಆದರೆ ಅದರ ವಿಚಾರದಲ್ಲಿ ಈಗ ನ್ಯಾಯ ಅಥವಾ ಅನ್ಯಾಯ ಎಂದು ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ.

Dr. R. NAGAN GOWDA.—Is there a difference between the market price and the price that is being paid now to the grower and if so what is the difference ?

ಶ್ರೀ ಕೆ. ಎಫ್. ಪಾಟೀಲ್.—ಆ ವ್ಯತ್ಯಾಸ ಇದೆ. ಹತ್ತು ಮಣದ ಕೆಳಗಿರತಕ್ಕವರು ಅದನ್ನು ಎಷ್ಟು ಬೆಲೆಗಾದರೂ ಮಾರಾಟ ಮಾಡಿಕೊಳ್ಳಬಹುದು. ಅದಕ್ಕೆ ಅಭ್ಯಂತರವಿಲ್ಲ. ಆದರೆ ಅದಕ್ಕೆ ಮೇಲ್ಪಟ್ಟ ಪ್ರಮಾಣಕ್ಕೆ ಅದು ಅನ್ವಯಿಸುವುದಿಲ್ಲ.

Construction of feeder channel from Hirehalla to Janakal tank in Hosadurga Taluk.

*Q.—130. **Sri B. S. SHANKARAPPA** (Hosadurga).—

Will the Government be pleased to state :—

(*a*) whether it is a fact that an estimate has been prepared for feeder channel from Hirehalla to Janakal tank, Madadakere hobli, Hosadurga taluk ;

(*b*) whether they are aware of the great hardships caused to the people as the tank does not hold enough water for an atchkat of 200 acres ;

(*c*) whether they would take necessary action and get the feeder channel constructed early ?

A—.**Sri H. M. CHANNABASAPPA** (Minister for Public Works and Electricity).—

(*a*) No.

(*b*) Yes.

(*c*) No, since the water from Hirehalla which is the main feeder halla to Devapura tank, is not sufficient for the atchkat of the Devapura tank itself.